ಆ) (ರೂ.ಲಕ್ಷಗಳಲ್ಲಿ)

ತಾಲ್ಲೂಕಿನ ಹೆಸರು	ಮಾನವ ಪ್ರಾಣ ಹಾನಿ	ಜಾನು ವಾರು ಹಾನಿ	ಮನೆ ಕುಸಿತ ಸಂಖ್ಯೆ	ಮನೆ ಕುಸಿತ ಲುಕ್ಸಾನು	ಸಾರ್ವಜನಿಕ ಆಸ್ತಿಪಾಸ್ತಿ ಹಾನಿ
1. ರಾಣಿಬೆನ್ನೂರು	1	3	-	-	-
2. ಹಾವೇರಿ	2	-	-	-	1.50
3. ಹುಬ್ಬಳ್ಳಿ	4	2	13	0.56	0.06
4. ಶಿಗ್ಗಾಂವ	-	9	08	-	0.30
5. ಬ್ಯಾಡಗಿ	2	-	-	-	-
6. ಧಾರವಾಡ	2	9	38	0.19	0.20
7. ಗದಗ	2	-	-	-	0.80
8. ಹಿರೇಕೆರೂರು	1	3	-	-	-
9. ಹಾನಗಲ್	-	14	-	-	-
10. ನವಲಗುಂದ	-	-	-	-	1.50
11. ರೋಣ	-	-	-	-	0.90
12. ಕಲಘಟಗಿ	-	-	-	-	0.30
ಒಟ್ಟು	14	40	59	0.75	5.56

ಇ) ನಿಯಮಾನುಸಾರ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗಿದೆ.

ವಿಷಯ:- ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಭವಿಸಿದ ನಷ್ಟ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 543 (318)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1995-96ನೇ ಸಾಲಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅನುಭವಿಸಿದ ನಷ್ಟವೆಷ್ಟು?

ಆ) 31-3-1996ರವರೆಗೆ ಸಂಸ್ಥೆಯ ಒಟ್ಟು ಸಂಚಿತ ನಷ್ಟವೆಷ್ಟು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):-

ಅ) ಸಂಸ್ಥೆಯ 1995-96ನೇ ಸಾಲಿನ ಲೆಕ್ಕಪತ್ರಗಳು ಇನ್ನೂ ಸಂಕಲನಾ ಹಂತದಲ್ಲಿರುತ್ತದೆ. ಆದುದರಿಂದ ಸದರಿ ಸಾಲಿನಲ್ಲಿ ಸಂಭವಿಸಬಹುದಾದ ನಷ್ಟದ ನಿಖರವಾದ ಮೊತ್ತವು ಸದ್ಯಕ್ಕೆ ಲಭ್ಯವಿರುವುದಿಲ್ಲ. ಆದಾಗ್ಯೂ ಸದರಿ ಸಾಲಿನಲ್ಲಿ ಸುಮಾರು 39 ಕೋಟಿ ರೂಪಾಯಿಗಳ ನಷ್ಟವು ಸಂಭವಿಸಬಹುದೆಂದು ಅಂದಾಜು ಮಾಡಲಾಗಿದೆ.

ಆ) 1995-96ನೇ ಸಾಲಿನಲ್ಲಿ ಸಂಭವಿಸಬಹುದಾದ 39 ಕೋಟಿ ರೂಪಾಯಿಗಳ ನಷ್ಟವೂ ಸೇರಿದಂತೆ 31-3-1996ರ ಅಂತ್ಯದ ವೇಳೆಗಿನ ಸಂಚಿತ ನಷ್ಟದ ಮೊಬಲಗು 476.09 ಕೋಟಿ ರೂಪಾಯಿಗಳಾಗಿರುತ್ತದೆ.

ವಿಷಯ: ಹಮಾಲರಿಗೆ ಮನೆ ಕಟ್ಟಿಸಿ ಕೂಡುವ ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 545 (316)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು):- ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96ನೇ ಸಾಲಿನಲ್ಲಿ ಎಷ್ಟು ಹಮಾಲರಿಗೆ ಮನೆಗಳನ್ನು ನಿರ್ಮಿಸಲು ನಿರ್ಧಾರ ಮಾಡಲಾಗಿದೆ (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಆ) ಈ ಯೋಜನೆಗೆ ನಿಗದಿ ಮಾಡಿದ ಮೊತ್ತ ಎಷ್ಟು (ಜಿಲ್ಲಾವಾರು ವಿವರವನ್ನು ಒದಗಿಸುವುದು)

ಇ) 31.3.96ರೊಳಗೆ ಸಾಧಿಸಲಾದ ಪ್ರಗತಿ ಎಷ್ಟು ? (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

ಶ್ರೀ ಸಿ.ಬೈರೇಗೌಡ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) ಸರ್ಕಾರದ ಆದೇಶ ಸಂಖ್ಯೆ ಸಿಎಂಡಬ್ಲ್ಯೂ 77 ಎಂಆರ್‌ಇ 95 ದಿನಾಂಕ 16-1-96ರಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಹಮಾಲರಿಗೆ ಮನೆಗಳನ್ನು ನಿರ್ಮಿಸಲು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿತ್ತು. ಆದರೆ 1996ನೇ ಸಾಲಿನಲ್ಲಿ ಹಮಾಲಿಯವರಿಗೆ ಯಾವುದೇ ಮನೆಗಳನ್ನು ನಿರ್ಮಿಸಲು ಸಾಧ್ಯವಾಗಿರುವುದಿಲ್ಲ.

ಆ) ಮೊತ್ತವನ್ನು ನಿಗದಿವಪಡಿಸಿರುವುದಿಲ್ಲ. 1996-97ನೇ ಸಾಲಿಗೆ 3489 ವಸತಿ ಗೃಹಗಳಿಗೆ ರೂ 1251.397 ಲಕ್ಷ ಅಂದಾಜನ್ನು ತಯಾರಿಸಿದೆ (ವಿವರ ಲಗತ್ತಿಸಿದೆ)

ಇ) ಉದ್ಭವಿಸುವುದಿಲ್ಲ.